ಸುಪ್ರೀಂಕೋರ್ಟಿನಲ್ಲಿ ನಮ್ಮ ಕೇಸ್ ಯಾವುದೂ ಪೆಂಡಿಂಗ್ ಇಲ್ಲ, ಇವತ್ತು 9 ಗಂಟೆಯೊಳಗೆ ರಿಟನ್ ಸ್ಟೇಟಮೆಂಟ್ ಕೊಡಬೇಕಾಗಿದ್ದು ಕಾಲಾವಕಾಶ ಇಲ್ಲದಿರುವುದರಿಂದ ಫೋನನಲ್ಲಿ ಕೇಳುತ್ತಿದ್ದೇನೆ ಎಂದು ಹೇಳಿದರು. ನಾನು ಹೇಳಿದೆ, ಫೋನ್‌ನಲ್ಲಿ ಕೇಳುತ್ತೀದ್ದೀರಿ, ನಾವು ಒಪ್ಪಿಗೆ ಕೊಡುವ ಪ್ರಶ್ನೆ ಬರುವುದಿಲ್ಲ, ಏನು ಹೇಳುವುದಕ್ಕೂ ನಮಗೂ ಇಕ್ಕಟ್ಟು. ಮುಖ್ಯಮಂತ್ರಿಗಳು ಕೇಳಿದಾಗ ನಾವು ಬೇಜವಾಬ್ದಾರಿಯಿಂದ ಉತ್ತರ ಕೊಡುವುದಕ್ಕಾಗುತ್ತದೆಯೇ? ಜವಾಬ್ದಾರಿ ತೆಗೆದುಕೊಂಡು ಹೇಳುವುದಕ್ಕೆ ನಮಗೆ ವಿಚಾರ ಗೊತ್ತಿಲ್ಲ. ಏಕೆಂದರೆ, ನಾವು ಅರ್ಥಮಾಡಿಕೊಂಡಿಲ್ಲ. ಅದಕ್ಕೆ ಏನು ಹೇಳಿದೆ ಎಂದರೆ, ತಾವು ದಯಮಾಡಿ, ಇದರ ಬಗ್ಗೆ ಚೆನ್ನಾಗಿ ಆಸಕ್ತಿ ವಹಿಸಿದರು ಎಂದು ತಿಳಿದುಕೊಂಡಿದ್ದೇನೆ. ತಮಗೆ ಇದರ ಸಾಧಕ ಬಾಧಗಳು ಗೊತ್ತಿದೆ, ನೀವೇ ಯೋಚನೆ ಮಾಡಿ, ರಾಜ್ಯದ ಹಿತಕ್ಕೆ ಯಾವುದು ಸೂಕ್ತವೆನಿಸುತ್ತದೆ ಅದನ್ನು ಮಾಡಿ ಎಂದು ಹೇಳಿದೆ. ಏಕೆಂದರೆ, ನಾನು ಕತ್ತಲಲ್ಲಿ ಇದ್ದೇನೆ. ನನಗೆ ವಿಚಾರಗಳು ಗೊತ್ತಿಲ್ಲ. ಎನ್ನುವ ಮಾತನ್ನು ಹೇಳಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಯಾರನ್ನಾದರೂ ದೂಷಣೆ ಮಾಡಬೇಕೆಂದಿಲ್ಲ. ಕಾವೇರಿ ಸಮಸ್ಯೆ ಬಗ್ಗೆ ಸರ್ಕಾರ ಏಕೆ ಇಷ್ಟೊಂದು ಅಸಡ್ಡೆ ಮಾಡುತ್ತಿದೆಯೋ ಗೊತ್ತಿಲ್ಲ. ಅವರು ಇವತ್ತು ಹೋಗುತ್ತಾರೆಂದೂ ಗೊತ್ತಿಲ್ಲ. 24 ರಿಂದ 28ರವರೆಗೆ ಈ ಸಭೆಯನ್ನು ಅಡ್ಜರ್ನ್ ಮಾಡಿಸಿಕೊಂಡಿದ್ದಾರೆ.

ಅಧ್ಯಕ್ಷರು : ನನ್ನ ಸಲಹೆ, ಏನೆಂದರೆ ಇವತ್ತಿನ ಅಜೆಂಡಾದಲ್ಲಿ ಮೊದಲನೆಯ ವಿಷಯ ಸಂತಾಪ ಸೂಚನೆ ಇದೆ. ಸಡನ್ ಆಗಿ ವಾಟಾಳ್ ನಾಗರಾಜರು ಎದ್ದರು, ಅದಕ್ಕಾಗಿ ನಾನು ಅವಕಾಶವನ್ನು ಕೊಟ್ಟೆ. ಮೊದಲು ಸಂತಾಪ ಸೂಚನೆಯನ್ನು ವಿಷಯವನ್ನು ಮುಗಿಸೋಣ. ಅನಂತರ ಈ ವಿಷಯವನ್ನು ತೆಗೆದುಕೊಳ್ಳೋಣ. ಈಗ ತಾಂತ್ರಿಕ ಕಷ್ಟ ಇದೆ. ಪ್ರಶ್ನೋತ್ತರವಾದ ನಂತರ ಹಕ್ಕುಚ್ಯುತಿ ವಿಷಯ ಇದೆ. ಅವರು ಈಗಲೇ ಪ್ರಾರಂಭ ಮಾಡಿದರು. ಆದ್ದರಿಂದ, ಈಗ ಸಂತಾಪ ಸೂಚನೆಯನ್ನು ತೆಗೆದುಕೊಳ್ಳೋಣ.

ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು : ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ಚಿದಾನಂದ ಹಾಗೂ ಕನ್ನಡದ ಹಿರಿಯ ಕವಿ ಶ್ರೀ ಸು.ರಂ. ಎಕ್ಕುಂಡಿ ಅವರುಗಳು ನಿಧನರಾದುದನ್ನು ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

1. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಕೆ. ಚಿದಾನಂದ ಅವರು ದಿನಾಂಕ 11-8-1995ರಂದು ನಿಧನರಾದರು. 1968ರಿಂದ 1971ರವರೆಗೆ ನಾಲ್ಕನೇ ವಿಧಾನ ಸಭೆಗೆ ಬೆಳ್ತಂಗಡಿ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀಯುತರು ಬೆಳ್ತಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ, ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಮಾಜದ ದುರ್ಬಲವರ್ಗಗಳ ಪರವಾಗಿ ಹೋರಾಡಿದ್ದರು.

2. ಕನ್ನಡದ ಹಿರಿಯ ಕವಿ ಶ್ರೀ ಸು.ರಂ. ಎಕ್ಕುಂಡಿ ಅವರು ದಿನಾಂಕ 20-8-1995ರಂದು ಬೆಂಗಳೂರಿನಲ್ಲಿ ನಿಧನರಾದರು. ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀಯುತರು

ಹದಿನಾಲ್ಕು ವರ್ಷದ ಬಾಲಕನಾಗಿದ್ದಾಗಿನಿಂದ ಕವನ ಬರೆಯುತ್ತಿದ್ದು, ನವೋದಯ ಸಾಹಿತ್ಯದ ಬೆಳವಣಿಗೆ ಮತ್ತು ಬದಲಾವಣೆಗೆ ಸ್ಪಂದಿಸಿದವರು. 1970ರಲ್ಲಿ ಶ್ರೇಷ್ಠ ಅನುದಾನಕ್ಕೆ ಹಿಂದಿನ ಸೋವಿಯತ್ ಒಕ್ಕೂಟದ ನೆಹರೂ ಶಾಂತಿ ಪ್ರಶಸ್ತಿ, 1985ರಲ್ಲಿ 'ಬಕುಲದ ಹೂವುಗಳು' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 1993ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ್ದು, ಶ್ರೀಯುತರು ವಾದಿರಾಜರ ಕೃತಿಗಳ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಸರ್ಕಾರದ ಫೆಲೋಶಿಪ್ ಕೂಡ ಪಡೆದಿದ್ದರು. ಶ್ರೀ ಎಕ್ಕುಂಡಿಯವರು 'ಸಂತಾನ, ಮತ್ಸಗಂಧ, ಹಾವಾಡಿಗರ ಹುಡುಗ, ಬೆಳ್ಳಕ್ಕಿ ಸೇರಿದಂತೆ ಹಲವಾರು ಕವನಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದಸ್ಯರು ಮೌನ ಆಚರಿಸಿದ ನಂತರ)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು.

ಕಾವೇರಿ ನ್ಯಾಯ ಮಂಡಳಿ ಬಗ್ಗೆ ಮುಂದುವರೆದ ಚರ್ಚೆ

+ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಕಾವೇರಿ ವಿಚಾರದಲ್ಲಿ ಏಕೆ ಇಷ್ಟೊಂದು ತಾತ್ಸಾರ ಮನೋಭಾವ ತಳೆದಿದೆ. ನಾನು ಇದನ್ನು ತಾತ್ಸಾರ ಮನೋಭಾವ ಎಂದು ಕರೆಯುತ್ತೇನೆ. ಏಕೆಂದರೆ, ನೀವು ಆಸಕ್ತಿ ವಹಿಸಿ ಕೆಲಸ ಮಾಡುತ್ತಿರಬಹುದು. ಅದು ನನಗೆ ಗೊತ್ತಿದೆಯೇ? ಏನು ಮಾಡಿದ್ದೀರೆಂದು ಗೊತ್ತಾಗಬೇಕು, ಈ ಸದನದ ಸದಸ್ಯರಿಗೆ ಗೊತ್ತಾಗಬೇಕು; ಈ ರಾಜ್ಯದ ಜನರಿಗೆ ಗೊತ್ತಾಗಬೇಕು. ಅಥವಾ ನಮ್ಮ ಸರ್ಕಾರಕ್ಕೆ ಏನಾದರೂ ಇಕ್ಕಟ್ಟು ಇದ್ದರೆ, ಎಲ್ಲವನ್ನೂ ಹೇಳುವುದಕ್ಕಾಗದೇ ಇದ್ದರೂ ಹೇಳುವಷ್ಟಾದರೂ ಹೇಳಬೇಕಾಗಿತ್ತು. ನಾನು ಏಕೆ ಹೇಳುತ್ತಿದ್ದೇನೆಂದರೆ, ತಮಿಳುನಾಡಿನಲ್ಲಿ ರೈತಸಂಘದವರು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿದಂಥ ಕಾಲದಲ್ಲಿ....

11.30 ಎ.ಎಂ

ತಮಿಳುನಾಡು ಸರ್ಕಾರವೇ ಕೇಸನ್ನೂ ನಡೆಸಿತು. ಆ ಕೇಸಿನಲ್ಲಿ ಅವರೇ, ಇಂಪ್ಲೀಡ್ ಆಗಿ We adopt the stand of ರೈತ ಸಂಘ ಅಂತ ಹೇಳಿ ಒಂದು ಅಫಿಡವಿಟ್ ಹಾಕಿದರು. ಈಗ ನಮ್ಮಲ್ಲಿ ನನಗೆ ಗೊತ್ತಿರುವ ಹಾಗೆ ಖಾಸಗಿ ಅರ್ಜಿಗಳು 4 ಇವೆ. ಈ ಕಾವೇರಿಗೆ ಸಂಬಂಧಪಟ್ಟ ಹಾಗೆ ನನ್ನದು ಸೇರಿ. ಈ ಅರ್ಜಿಗಳ ಬಗ್ಗೆ ಏನು ಅಂತ ವಿಚಾರ ಅಂತ ತಿಳಿದುಕೊಳ್ಳುವಂಥ ಮನಸ್ಸು ನಮ್ಮ ಸರ್ಕಾರ ಮಾಡಲಿಲ್ಲ.